Reg. No. | | | | | | | | | |

**BBAKALN 101**

## I Semester B.B.A. Examination, April/May 2022
## (2021 – 22 Batch Onwards) (NEP – 2020)
## KANNADA
## Kannada Language – I (AECC)

Time : 2 Hours Max. Marks : 60

I. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. **(3×8=24)**

1) ಬಸವಣ್ಣನ ವಚನಗಳಲ್ಲಿ ಪ್ರಕಟವಾಗುವ ಭಕ್ತಿಯ ಸ್ವರೂಪವನ್ನು ವಿವರಿಸಿರಿ.

**ಅಥವಾ**

ರುಕ್ಮಿಣಿ ಗರ್ವಭಂಗದ ಪ್ರಸಂಗ ಜನಪದ ಕಾವ್ಯಭಾಗದಲ್ಲಿ ಹೇಗೆ ವ್ಯಕ್ತವಾಗಿದೆ ? ವಿವರಿಸಿರಿ.

2) 'ಮಿತ್ರ-ಮಾರ್ಗದರ್ಶಕ-ದಾರ್ಶನಿಕ ಸಂಗಾತಿಯಾಗಲು ಪುಸ್ತಕಗಳಿಂದ ಮಾತ್ರ ಸಾಧ್ಯ' ಎಂಬುದನ್ನು 'ಏಕೆ ಓದಬೇಕು ?' ಎಂಬ ಲೇಖನದ ಹಿನ್ನೆಲೆಯಲ್ಲಿ ವಿವರಿಸಿರಿ.

**ಅಥವಾ**

ಶಿಕ್ಷಕ ವೃತ್ತಿಯ ಸ್ವಾರಸ್ಯಕರ ಸಂಗತಿಗಳು 'ಮೇಷ್ಟ್ರು ಕಂಡ ಅವಾಂತರಗಳು' ಪ್ರಬಂಧದಲ್ಲಿ ಹೇಗೆ ವ್ಯಕ್ತವಾಗಿವೆ ? ವಿವರಿಸಿರಿ.

3) ಬುದ್ಧನೊಳಗಿನ ಶಾಂತಿ ಅವನೊಂದಿಗಿನ ಇತರರಲ್ಲಿ ಪ್ರತಿಫಲಿಸುವ ಬಗೆಯನ್ನು ವಿವರಿಸಿ.

**ಅಥವಾ**

ನಾಟಕದಲ್ಲಿ ಬುದ್ಧನ ಪಾತ್ರ ಹೇಗೆ ಚಿತ್ರಿತವಾಗಿದೆ ? ವಿವರಿಸಿರಿ.

II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. **(3×5=15)**

1) ಭೀಷ್ಮನು ಪ್ರತಿಜ್ಞಾಬದ್ಧನಾದ ಸನ್ನಿವೇಶವನ್ನು ವಿವರಿಸಿರಿ.

**ಅಥವಾ**

'ಜೀತದಾಳಿನ ಗಾಥೆ' ಕವನದ ಆಶಯವೇನು ? ವಿವರಿಸಿರಿ.

2) 'ಕಠಿಣ ಪರಿಸ್ಥಿತಿಗಳು ಮನುಷ್ಯನನ್ನು ಸಾಹಸಿಯನ್ನಾಗಿಸುತ್ತವೆ' ಎಂಬ ಮಾತು ಫರಾಳ ಬದುಕಿಗೆ ಹೇಗೆ ಅನ್ವಯಿಸುತ್ತದೆ ? ವಿವರಿಸಿರಿ.

**ಅಥವಾ**

'ಪಾತಾಳಗಂಗಾ-ಬರಿದಾಗಲಿರುವ ಅಂತರಗಂಗೆ' ಲೇಖನದ ಆಶಯವೇನು ?

3) ಅಂಬಾಪಾಲಿ ಯಶೋಧರೆಯನ್ನು ಭೇಟಿಯಾಗುವ ಸಂದರ್ಭವನ್ನು ವಿವರಿಸಿರಿ.

**ಅಥವಾ**

ರಾಹುಲನ ಪಾತ್ರವನ್ನು ಪರಿಚಯಿಸಿ.

III. ಈ ಕೆಳಗಿನವುಗಳಲ್ಲಿ **ಒಂದರ** ಸಂದರ್ಭ ಸೂಚಿಸಿ ಭಾವಾರ್ಥ ವಿವರಿಸಿರಿ. (1×5=5)

1) ತಾಯ ಗರ್ಭದ ಶಿಶು ತಾಯ ಕುರುಹನರಿಯದು
ಆ ತಾಯಿ ಶಿಶುವಿನ ಕುರುಹನೆಂದೂ ಅರಿಯಳು
ಮಾಯಾಮೋಹದಲ್ಲಿಪ್ಪ ಭಕ್ತರು ದೇವರನರಿಯರು
ಆ ದೇವರು ಆ ಭಕ್ತರನೆಂದೂ ಅರಿಯನು
ಕಾಣಾ ರಾಮನಾಥ

2) ಬಿಚ್ಚಬಹುದು
ಉಟ್ಟ ಸೀರೆಯನ್ನು
ಕಟ್ಟಿದ ಪೇಟವನ್ನು
ಬಿಚ್ಚಿ ತೋರಿಸಬಹುದೇ
ತೋರಿಸಿ ಒಪ್ಪಿಸಬಹುದೇ ?
ನಮ್ಮೆಲ್ಲ ಭೂತವರ್ತಮಾನದ
ಸತ್ಯವನ್ನು ?

IV. ಯಾವುದಾದರೂ **ಎರಡು** ಸಾಲುಗಳಿಗೆ ಸಂದರ್ಭ ಸ್ವಾರಸ್ಯ ವಿವರಿಸಿರಿ. (2×4=8)

1) ಇಂದು ಒಪ್ಪುದು ನಮಗೀಗಲೇ ಬರಲಿ
2) ತನ್ನಯ ತಂದೆಯೆಂದುದನೆ ಕೊಟ್ಟು ವಿವಾಹಮನಿಂದೆ ಮಾಡುವೆಂ
3) ಬಾಯ್ತೆರೆದ ಭೂಮಿಯೊಳಗೆ ಎಲ್ಲ ಸೀತೆಯರ ಹಾಗೆ ಸರಿಯಬಾರದು
4) ರಾಜ್ಯಪಟ್ಟ ನನಗಿಲ್ಲ ದ್ರವ್ಯದ ಅನುಕೂಲಾ.

V. **ಒಂದು** ವಾಕ್ಯದಲ್ಲಿ ಉತ್ತರಿಸಿರಿ. (8×1=8)

1) ಪಂಪನ ಆಶ್ರಯದಾತ ಯಾರು ?
2) ದ.ರಾ. ಬೇಂದ್ರೆಯವರ ಕಾವ್ಯನಾಮವೇನು ?
3) ದಾಸಿಮಯ್ಯನ ವಚನಗಳ ಅಂಕಿತವೇನು ?
4) 'ವರಕವಿ' ಎಂದು ಯಾರನ್ನು ಕರೆಯುತ್ತಾರೆ ?
5) 'ಒಂದು ಆಫ್ಘನ್ ಹುಡುಗಿಯ ಕಥೆ' ಈ ಲೇಖನದ ಕರ್ತೃ ಯಾರು ?
6) ಕೆ.ಟಿ. ಗಟ್ಟಿಯವರ ಲೇಖನದ ಹೆಸರೇನು ?
7) ಕನ್ನಡ ಆಸ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾದವರು ಯಾರು ?
8) ಸಿದ್ಧಾರ್ಥನ ಜನ್ಮಸ್ಥಳ ಯಾವುದು ?